+ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ತುರುವೇಕೆರೆ) :— ಮಾನ್ಯ ಛೇರ್ಮನ್‌ರವರೆ, ಸರ್ಕಾರ ಮಂಡಿಸಿರುವ ಬೇಡಿಕೆಗಳ ಮೇಲಿನ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತಾ, ಇಡೀ ರಾಜ್ಯ ಬರಗಾಲದ ಪರಿಸ್ಥಿತಿಯನ್ನು ಎದುರಿಸುತ್ತಿರುವಂಥ ಸಂದರ್ಭದಲ್ಲಿ ಕೃಷಿ, ತೋಟಗಾರಿಕೆ, ಹೈನೂಗಾರಿಕೆ ಮತ್ತು ನೀರಾವರಿಗೆ ಸಂಬಂಧಿಸಿದ ಇಲಾಖೆಗಳ ಬೇಡಿಕೆಗಳ ಮೇಲೆ ಚರ್ಚಿಸುವುದಕ್ಕೆ ನಾನು ಇಚ್ಛಿಸುತ್ತಿದ್ದೇನೆ. ಇವೊತ್ತು ಗ್ರಾಮೀಣ ಜನರ ಬೇಡಿಕೆ ಕೃಷಿ, ತೋಟಗಾರಿಕೆ ಮತ್ತು ಹೈನುಗಾರಿಕೆ ಕ್ಷೇತ್ರದಲ್ಲಿದ್ದು, ಈ ಪೈಕಿ ರಾಜ್ಯದ ಶೇಕಡ 70ರಷ್ಟು ಸಣ್ಣ ರೈತರು, ದೊಡ್ಡ ರೈತರು ಹಾಗೂ ಪರಿಶಿಷ್ಟ ಜಾತಿ : ವರ್ಗಗಳಿಗೆ ಸೇರಿರುವ ಕೂಲಿ ಕಾರ್ಮಿಕರಿಗಳೇ ಕೃಷಿ ಕ್ಷೇತ್ರವನ್ನು ಅವಲಂಬಿಸಿರುತ್ತಾರೆ. ಮತ್ತು ನಿರೀಕ್ಷಿಸಿರುವ ಮಟ್ಟದಲ್ಲಿ ಕೃಷಿ ಕ್ಷೇತ್ರದಿಂದ ಇವರಿಗೆ ಸರ್ಕಾರದ ವತಿಯಿಂದ ಅನುಕೂಲ ಸಿಗುತ್ತಿಲ್ಲದಿರುವುದು ನಮಗೆ ಗೋಚರವಾಗುತ್ತಿದೆ. ಕಾರಣ, ಇವೊತ್ತು ಸರ್ಕಾರ ಹತ್ತಾರು ಕೋಟಿ ರೂಪಾಯಿಗಳನ್ನು ಈ ಇಲಾಖೆಗಳ ಮುಖಾಂತರ ಬಿಡುಗಡೆ ಮಾಡುತ್ತಿದ್ದರೂ, ಆ ಹಣ ಗ್ರಾಮೀಣ ಜನರಿಗೆ ಸರಿಯಾದ ರೀತಿಯಲ್ಲಿ ತಲುಪುತ್ತಿಲ್ಲದಿರುವುದರಿಂದ ಸದರಿ ಕ್ಷೇತ್ರಗಳ ಮೇಲೆ ಅವಲಂಬಿಸಿರುವವರು ಅದನ್ನು ತೊರೆದು ಜೀವನೋಪಾಯಕ್ಕಾಗಿ ಪಟ್ಟಣ-ಪ್ರದೇಶಗಳಿಗೆ ವಲಸೆ ಹೋಗುತ್ತಿರುವುದನ್ನು ನಾವು ಈಗಾಗಲೇ ಗಮನಿಸಿದ್ದೇವೆ. ನಮ್ಮ ರಾಜ್ಯದಲ್ಲಿ

4.20 ಪಿ.ಎಂ.

ಸುಮಾರು 27 ಸಾವಿರ ಕಂದಾಯ ಗ್ರಾಮಗಳಿದೆ. ಇದರಲ್ಲಿ ಕೃಷಿಯನ್ನು ನಂಬಿಕೊಂಡಿರುವ ರೈತಾಪಿ ಜನರು ನಾವು, ಪ್ರಕೃತಿಯನ್ನು ನಂಬಿಕೊಂಡು ಕೆಲಸ ಮಾಡತಕ್ಕ ಜನರು ನಾವಾಗಿದ್ದೇವೆ. ನಮಗೆಲ್ಲ ಗೊತ್ತಿರುವಂತೆ ಹೋದ ವರ್ಷ ಅತಿವೃಷ್ಟಿಯಾಯಿತು. ನೂರಕ್ಕೆ ನೂರು ಭಾಗ ಕೈಗೆ ಬದಂಥ ಬೆಳೆ ಅತಿವೃಷ್ಟಿಯಿಂದ ಹಾಳಾಗಿರುವುದನ್ನು ನಾವು ನೋಡಿದ್ದೇವೆ. ಅದೇ ರೀತಿ ಬರಗಾಲದಿಂದ ಈ ವರ್ಷ ಒಂದು ಕಾಳು ಬಿತ್ತನೆಯನ್ನೂ ಮಾಡದೆಯೆ ಇರತಕ್ಕ ಪರಿಸ್ಥಿತಿ ಬಂದಿದೆ.

(5) ಪ್ರಕಟಣೆ

MR. CHAIRMAN :— Sri E.A. Rashetnikov, Deputy Minister for Atomic Energy from Russia and his team are witnessing the proceedings of the House from Speaker's gallery. On behalf of the House and on my behalf, I warmly welcome the delegates.